ಜೆ.ಆರ್. ಆದಿನಾರಾಯಣ, ಬೆಂಗಳೂರು

*ಪ್ರೀತಿ, ಪ್ರೇಮ ಮಾರಾಟದ ಸರಕಾಗಿದ್ದದ್ದರೆ?*




ಅದು ಎಂದಿಗೂ ಮಾರಾಟದ ಸರಕೇ. ಮಾರ ಉರುಫ್ ಮನ್ಮಥನ ಆಟದ ಸರಕು!

ಶಾಂತಕುಮಾರ್, ಮೈಸೂರು

*ವಿದ್ಯಾರ್ಥಿಗಳು ಯಾರಿಂದಲೂ ಹೇಳಿಸಿಕೊಳ್ಳದೆ ತಮಗೆ ತಾವೇ ಕಲಿತುಕೊಳ್ಳುವ ಪಾಠ ಯಾವುದು ರಾಮ್‌ಜೀ?*

ಚಕ್ಕರ್ ಹೊಡೆದದ್ದಕ್ಕೆ ಸಬೂಬು ಹೇಳುವುದು.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಒಳ್ಳೆಯ ಜನರಿಗೆ ಒಳ್ಳೆಯ ಮಕ್ಕಳು ಹುಟ್ಟುವುದಿಲ್ಲವೇಕೆ?*

ಹಾಗೇನಿಲ್ಲ; ನಾವ್ ನಮ್ಮಪ್ಪ ಅಮ್ಮಂದ್ರಿಗೆ ಏನೇನ್ ಮಾಡಿದ್ವೋ ನಾಳೆ ನಮ್ಮ ಮಕ್ಕಳು ನಮಗ್ ಮಾಡೋದೂ ಅದೇ ಎನ್ನುತ್ತಾರೆ ಮಾಸ್ಟರ್ ಹಿರಣ್ಣಯ್ಯ.

ಎಸ್.ಜಿ. ರಾಜಶೇಖರರೆಡ್ಡಿ, ಕಿರೇಕೊಳಂ

*ಕಡಿಮೆ ಮಾತಾಡಿದರೆ ಮೂಸಂಡಿ, ಹೆಚ್ಚು ಮಾತಾಡಿದರೆ ಬಾಯ್ಬಡುಕ; ಹಾಗಾದರೆ ಹೇಗಿರಬೇಕು?*



ಮಾತನಾಡದೆಯೇ ಇದ್ದುಬಿಡಿ; ಶ್ರೀಶ್ರೀಶ್ರೀ ಮೌನಸ್ವಾಮಿಗಳು ಎಂದು ಗೌರವಿಸಿ ಮಠ ಕಟ್ಟಿಕೊಟ್ಟಾರು!

ಬಾ.ರಂ. ಸುರೇಶ್, ಶಿವಮೊಗ್ಗ

*ವರ್ಷದ 365 ದಿನಗಳಲ್ಲಿ ವಿಶೇಷ ದಿನ ಇಲ್ಲದಿರುವುದು ಯಾವಾಗ ಕೂಡಲೆ ತಿಳಿಸುವಿರಾ?*

ಏಪ್ರಿಲ್ ಒಂದು! ಅಂದೂ ದಿನನಿತ್ಯದಂತೆ ಅಂದೂ ಜನ ಮೂರ್ಖರಾಗುವುದರಿಂದ ವಿಶೇಷವಿಲ್ಲ!

ಸವಿರವಿ, ಬಾಳೆಹೊನ್ನೂರು

*ಪ್ರಶ್ನೆ ಉತ್ತಮವಾಗಿದ್ದರೆ ಬಹುಮಾನಿತ ಪ್ರಶ್ನೆ ಎಂದು ಬಹುಮಾನ ಕೊಡುತ್ತೀರಿ; ಉತ್ತರ ಉತ್ತಮವಾಗಿದ್ದರೆ ನಿಮಗೆ ಯಾರು ಏನು ಕೊಡುತ್ತಾರೆ?*

ನೀವೇ... ಮತ್ತಷ್ಟು ಪ್ರಶ್ನೆಗಳನ್ನು!

ಎಂ.ಎಸ್.ಸೋಮಶೇಖರ್, ಮೈಸೂರು

*ಓರ್ವ ಪತಿ ಮತ್ತೊಬ್ಬನ ಪತ್ನಿಯೊಂದಿಗೆ ಸೇರಿ ಓಡಾಡಿದರೆ?*

ನಾನೇ ಹಾಗೆ ಮಾಡುವೆನಲ್ಲಾ, ನನ್ನ ತಂಗಿ ಮತ್ತೊಬ್ಬನ ಸತಿಯೇ ಹೌದು.

ಗಾಯತ್ರಿ, ರಾಜಾಜಿನಗರ

*ಗುರುಗಳೇ, ನಿಮಗೆ ಶಿಷ್ಯರ ಅಗತ್ಯವಿದೆಯೇ? ಇದೆಯಾದರೆ...?*

ಹೆಸರಿನಲ್ಲೇ ಮೂರು ಗಾಯ ಹೊಂದಿರುವ ನಿಮ್ಮನ್ನು ಶಿಷ್ಯೆಯಾಗಿ ಸ್ವೀಕರಿಸಿದರೆ ಎನಿತು ಘೋರಂಗಳ್ ಸಂಭವಿಪವೋ... ಬೇಡಪ್ಪಾ!

ಆರ್. ವಿಜಯಲಕ್ಷ್ಮಿ, ಬೆಂಗಳೂರು

*ರಸ್ತೆ ವಿಸ್ತರಣೆಯಿಂದ ಪರಿಸರ ಹಾಳಾಗುತ್ತಿದೆಯಲ್ಲಾ, ಇದು ಸರಿಯೇ?*

ಶುದ್ಧ ತಪ್ಪು, ಮದುವೆಯಂತೆಯೇ ಇದೂ ಸಹ; ಮಾಡಬಾರದು, ಆದರೆ ಅನಿವಾರ್ಯ!

ರವಿ ಎಂ. ಪೈ, ಕಾಸರಗೋಡ

*ಭಾರತದಲ್ಲಿ ಬ್ಯೂಟಿ ಪಾರ್ಲರ್‌ಗಳು ಹೆಚ್ಚಾಗಲು ಕಾರಣವೇನು?*

ಬ್ಯೂಟಿ ಸಿಕ್ಕದಾದರೆ ಪಾರ್ಲರ್ ದೊಡ್ಡದು.

ಕಾಳೇಹುಂಡಿ ಕೆ.ವಿ. ಶಿವಕುಮಾರ್, ಮೈಸೂರು

*ದಾಂಪತ್ಯದ ಸೊಗಡು ಯೌವನದಲ್ಲೋ, ವೃದ್ಧಾಪ್ಯದಲ್ಲೋ?*

ಹುರುಪು ಯೌವನದಲ್ಲಿ, ಹುರುಳು ವೃದ್ಧಾಪ್ಯದಲ್ಲಿ.

ಮ.ಹ. ಬಗಲಿ, ಗಿರಗಾಂವ

*ಹಾಲನ್ನು ಬೀದಿ ಬೀದಿ ತಿರುಗಿ ಮಾರಬೇಕಾಗುತ್ತದೆ; ಮದಿರೆಯನ್ನು ಕುಳಿತಲ್ಲೇ ಮಾರಲಾಗುತ್ತದಲ್ಲಾ..?*

ಸರಿಯೇ. ಒಳಿತನ್ನು ಎಲ್ಲೆಡೆಗೂ ಹಂಚಬೇಕು, ಕೆಡುಕನ್ನು ಮೂಲೆಗುಂಪಾಗಿಸಬೇಕು!

ಎಂ.ಬಿ. ಚೋದಾನಪುರ, ಸವದತ್ತಿ

*ಸ್ತ್ರೀಸಂಗ ಬಯಸುವ ಕೆಲವರು ಮದುವೆಯಾಗುವುದಿಲ್ಲವೇಕೆ?*

ಅವರು ಬಯಸುವುದು ಸ್ತ್ರೀಸಂಗವಲ್ಲ, ಸ್ತ್ರೀ ಸಂಘವನ್ನೇ. ಇದಕ್ಕೆ ಈಗಿನ ಕಾಲದಲ್ಲಿ ಸಂಸಾರಕ್ಕಿಂತಲೂ ಸಂನ್ಯಾಸವೇ ಸೂಕ್ತವಂತೆ.

## ಬಹುಮಾನಿತ ಪ್ರಶ್ನೆ

ಮೊಳಕಾಲ್ಮೂರು ಸುರೇಶ್, ಬಳ್ಳಾರಿ

*ಅಲ್ಲಣ್ಣಾ, ಹುಟ್ಟು ಸಾವಿನ ರಹಸ್ಯ ತಿಳಿದರೆ ಬದುಕಿನಲ್ಲಿ ಸ್ವಾರಸ್ಯವಿರುವುದಿಲ್ಲ ಓ ಮನುಜ ಎಂದು ಇಲ್ಲೊಬ್ಬ ರಾಗವಾಗಿ ಹಾಡುವುದರ ರಹಸ್ಯ?*

ಬಡಪಾಯಿ! ಹುಟ್ಟು ಸಾವುಗಳ ರಹಸ್ಯ ತಿಳಿದದ್ದೇ ಅಲ್ಲವೇ; ರಾಗದಿಂದ ಹುಟ್ಟು, ವಿರಾಗದಿಂದ ಸಾವು!

ವಿ. ಹಮೀದ್, ವಿಟ್ಲ

*ಪ್ರೇಯಸಿಗೂ, ಕಳ್ಳನಿಗೂ ಇರುವ ವ್ಯತ್ಯಾಸವೇನು ರಾಮ್‌ಜೀ?*

ಪ್ರೇಯಸಿಯಿಂದ ಕದಿಸಿಕೊಳ್ಳುವುದರಲ್ಲಿ ಏನೋ ಹಿತವಿದೆ;

ಅಮರಯ್ಯ ಪತ್ರಿಮಠ, ಕೋರಾಪುರ

*ಹೃದಯಕ್ಕೂ, ಬುದ್ಧಿಗೂ ಎಂತಹ ನಂಟಿರಬೇಕು?*

ಪರಿಶುದ್ಧತೆಯ ನಂಟು; ಬ್ಲಾಕ್ ಆದರೆ ಎರಡೂ ವ್ಯರ್ಥ!

ಖಲಂದರ್ ಅಥೀರ್ಭ್, ಜಾವಗಲ್

*ಈಗ ಕರ್ನಾಟಕದ ಮಂತ್ರಿಯಾಗಲು ಇರುವ ಮಾನದಂಡಗಳೇನು?*




ಮಾನ ಇರುವುದೇ ದಂಡ ಎಂಬ ಮನೋಭಾವವಿದ್ದರೆ ಸಾಕು.

ಎಂ. ಶಿವರಾಂ, ಬೆಂಗಳೂರು

*ವಿಳಂಬನೀತಿ ಅನುಸರಿಸಿ ಸಮಸ್ಯೆಗಳನ್ನು ಜೀವಂತವಾಗಿರಿಸುವುದು ಆಡಳಿತದ ಲಕ್ಷಣವೇ?*

ಸಮಸ್ಯೆಗಳೇ ಆಶ್ವಾಸನೆಗಳ ಮೂಲ, ಆಶ್ವಾಸನೆಗಳು ಮತಗಳಿಕೆಗೆ ಮೂಲ. ಮೂಲ ತೊರೆಯೆ ಮೂಲೆಯೇ ಗತಿಯೆಂದನಾ ಆಡಳಿತಜ್ಞ.

ಎಂ.ವಿ. ಶ್ರೀನಿವಾಸ, ಚನ್ನಗಿರಿ

*ಮುಟ್ಟಿದ್ದೆಲ್ಲಾ ಚಿನ್ನ ಎಂದರೇನ್ರೀ?*

ಕೈಯೆಲ್ಲಾ ಹಳದಿಯಾಗಿದೆ ಎಂದು! ಎ ವೆರಿ ಅಕ್ಯೂಟ್ ಕೇಸ್ ಆಫ್ ಕಾಮಾಲೆ!

■ ರಾಮ್